# ಏಕಾಂತದ ನೋವು ಮತ್ತು ಸುಖ



■ ಎ. ರಾಮು

ಯೌವನದಲ್ಲಿ ಏಕಾಂತ ನೋವು ಕೊಡುತ್ತದೆ. ಆದರೆ, ಮನುಷ್ಯ ಹೆಚ್ಚು ಹೆಚ್ಚು ಪ್ರೌಢನಾಗುತ್ತಾ ಹೋದಂತೆ ಏಕಾಂತ ಸಂತೋಷವನ್ನುಂಟು ಮಾಡುತ್ತದೆ. ವಿಶ್ವವಿಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್ ಅವರ ಈ ಮಾತು ಈ ಹೊತ್ತಿನ ನಮ್ಮೆಲ್ಲರ ಸ್ಥಿತಿಯನ್ನು ಸೂಚಿಸುವಂತಿದೆಯಲ್ಲವೆ?

ಐನ್‌ಸ್ಟೈನ್ ಅವರ ಮಾತು ಸಮಕಾಲೀನ ತವಕ ತಲ್ಲಣಗಳಿಗೆ ಕನ್ನಡಿಯಷ್ಟೇ ಅಲ್ಲ, ತಲೆಮಾರುಗಳ ನಡುವಿನ ಮನೋಧರ್ಮವನ್ನೂ ಸೂಚಿಸುವಂತಿದೆ. ತುಂಬಿ ತುಳುಕುವ ನಗರಗಳನ್ನೂ ಬಿಕೋ ಎನ್ನುತ್ತಿರುವ ಹಳ್ಳಿಗಳನ್ನೂ ನೋಡಿದರೆ ಈ ಮಾತಿನ ಅರ್ಥ ಹೊಳೆಯುತ್ತದೆ. ಆಧುನಿಕತೆ ಸೃಷ್ಟಿಸಿರುವ ಸಕಲ ಭೋಗಗಳಿಗೂ ಆವಾಸ ಸ್ಥಾನದಂತಿರುವ ನಗರಗಳು ಯೌವನದ ರೂಪದಂತೆ ತೋರಿದರೆ, ಮೈಯಲ್ಲಿ ಕಸುವುಳ್ಳವರನ್ನೆಲ್ಲ ನಗರಗಳಿಗೆ ಬೀಳ್ಕೊಟ್ಟ ಹಳ್ಳಿಗಳು ಯೌವನವನ್ನು ಕಳಕೊಂಡ ಬದುಕಿನ ಅವಸ್ಥೆಯಂತೆ ಕಾಣಿಸುವುದಿಲ್ಲವೇ? ಈ ಹೊತ್ತಿನ ನಗರಗಳಲ್ಲಿ ಏಕಾಂತಕ್ಕೆ ಆಸ್ಪದ ಕಡಿಮೆ. ಹಳ್ಳಿಗಳಲ್ಲಿ ಇರುವವರಲ್ಲಿ ಮುದುಕರೇ ಹೆಚ್ಚು; ಅವರಿಗೋ ಒಂಟಿತನ ಎನ್ನುವುದು ಅನಿವಾರ್ಯತೆ. ನೀರವತೆಯ ನಡುವೆ ಆಗೊಂದು ಈಗೊಂದು ತೂರಿಬರುವ ವೃದ್ಧರ ಪಿಸುಮಾತುಗಳು ಹಳ್ಳಿಗಳ ಒಂದು ಕಾಲದ ಯೌವನದ ಕಥೆಗಳ ಸ್ವಗತದಂತೆ ತೋರುತ್ತವೆ.

ಲೋಕಾಂತ ಅನೇಕ ಸವಲತ್ತುಗಳನ್ನು ಕಲ್ಪಿಸುತ್ತದೆ, ನಿಜ. ಆದರೆ, ಏಕಾಂತದಲ್ಲೂ ಕೆಲವು ಲಾಭಗಳಿವೆ. ಅವುಗಳಲ್ಲಿ ಮುಖ್ಯವಾದುದು ವ್ಯಕ್ತಿ ತನ್ನ ಅಸ್ಮಿತೆಯನ್ನು ಕಾಪಾಡಿಕೊಳ್ಳುವುದು. ಲೋಕಾಂತದ ಗೌಜಿಯೊಂದಿಗೆ ಬದುಕುವವರು ಸಾರ್ವಜನಿಕ ವ್ಯವಸ್ಥೆಯ ನೀತಿನಿಯಮಗಳಿಗೆ ಒಳಪಡುವುದು ಅನಿವಾರ್ಯ. ಆದರೆ, ಒಂಟಿಯಾಗಿ ಬದುಕುವವರು ತಮ್ಮದೇ ಜಗತ್ತನ್ನು ಸೃಷ್ಟಿಸಿಕೊಳ್ಳಬಲ್ಲರು. ಆ ಲೋಕದಲ್ಲಿ ಅವರದೇ ನಿಯಮಗಳು.

'ನಾನು, ನನ್ನಿಷ್ಟ' ಎನ್ನುವುದಕ್ಕೆ ಏಕಾಂತವೇ ಸೂಕ್ತ. ಇಂಥ ಏಕಾಂತ, ನಗರಗಳ ಪಾಲಿಗೆ ಮರೀಚಿಕೆ. ಹಾಗೆ ನೋಡಿದರೆ, ನಗರಗಳಲ್ಲಿ ಬದುಕುವ ಪ್ರತಿಯೊಬ್ಬರೂ ಒಂದಲ್ಲಾ ಒಂದು ಬಾರಿ ಏಕಾಂತಕ್ಕಾಗಿ ಹಂಬಲಿಸಿದವರೇ; ಅದು ದೊರೆಯದೆ ನಿರಾಶರಾದವರೇ. ಅಮೆರಿಕದ ಕವಿ–ಪತ್ರಕರ್ತ ಕಾರ್ಲ್ ಸ್ಯಾಂಡ್‌ಬರ್ಗ್, 'ಸೃಜನಶೀಲ ಏಕಾಂತದ ಅನ್ವೇಷಣೆ ಅಮೆರಿಕದ ಬಹು ದೊಡ್ಡ ಅಗತ್ಯಗಳಲ್ಲೊಂದಾಗಿದೆ' ಎನ್ನುತ್ತಾನೆ. ಕಾರ್ಲ್‌ನ ಈ ಮಾತು ಅಮೆರಿಕಕ್ಕೆ ಮಾತ್ರವಲ್ಲ, ಆಧುನಿಕತೆಗೆ ಒಪ್ಪಿಸಿಕೊಂಡ ಎಲ್ಲ ಮಹಾನಗರಗಳ ಸ್ಥಿತಿಯೂ ಹೌದು. ಈ ಏಕಾಂತದ ಕೊರತೆ ನಗರದ್ದೂ ಹೌದು, ವ್ಯಕ್ತಿಯದೂ ಹೌದು. ಏಕಾಂತದ ಈಡೇರದ ಬಯಕೆ ಎನ್ನುವುದು ಆಧುನಿಕತೆ ಸೃಷ್ಟಿಸಿರುವ ಕಹಿಫಲಗಳಲ್ಲೊಂದೂ ಹೌದು.

ಕಾರ್ಲ್ ಸೂಚಿಸುವುದು ಬರಿಯ ಏಕಾಂತವನ್ನಲ್ಲ; ಸೃಜನಶೀಲ ಏಕಾಂತವನ್ನು. ಕೋಣೆಯೊಂದರಲ್ಲಿ ಒಂಟಿಯಾಗಿ ಕುಳಿತು ಏಕಾಂತವನ್ನು ಸಾಧಿಸಿದೆವು ಎಂದರೆ ಅದು ಸುಳ್ಳೇ ಸುಳ್ಳು. ಒಂಟಿತನವೇ ಬೇರೆ, ಏಕಾಂತವೇ ಬೇರೆ. ಏಕಾಂತ ಎನ್ನುವುದು ಅಂತರಂಗದ ನಿರ್ವಾಣದ ಸ್ಥಿತಿ. ಅಂತರಂಗದೊಂದಿಗೆ ಸಂವಾದ ಏರ್ಪಡಿಸುವ ಸ್ಥಿತಿ. ಅಂಥ ಸ್ಥಿತಿಯನ್ನು ದಕ್ಕಿಸಿಕೊಳ್ಳುವುದು ಯೌವನರೂಪಿಯಾದ ನಗರಗಳಲ್ಲಿ ಸುಲಭವಲ್ಲ. ಕವಿ ಕಲಾವಿದರೆ ಸೃಜನಶೀಲ ಏಕಾಂತ ಸ್ವಲ್ಪಮಟ್ಟಿಗೆ ದೊರೆಯುತ್ತದೆ. ಆದರೆ, ಅದರ ಪೂರ್ಣಸಿದ್ಧಿಗೆ ಗ್ರಾಮಗಳತ್ತಲೇ ಮುಖ ಮಾಡಬೇಕು. ಇಲ್ಲವೇ, ನಗರಗಳಲ್ಲಿದ್ದೂ ಅಲ್ಲಿನ ಆಕರ್ಷಣೆಗಳಿಂದ ತಪ್ಪಿಸಿಕೊಳ್ಳುವುದು ಸಾಧ್ಯವಾದರೆ, ಗಾಂಧಿಗೆ ದಕ್ಕಿದ ಸರಳತೆಯನ್ನು ನಮ್ಮದಾಗಿಸಿಕೊಳ್ಳುವುದು ಸಾಧ್ಯವಾಗುವುದಾದರೆ, ಯಾವ ದೇಶ–ಕಾಲದಲ್ಲೂ ಮನುಷ್ಯನಿಗೆ ಏಕಾಂತ ದಕ್ಕಬಹುದು. ಈ ವೈರುಧ್ಯವನ್ನು ಅರ್ಥ ಮಾಡಿಕೊಳ್ಳಲು ಪಾಲ್ ಸಾರ್ತ್ರೆಯ ಮಾತನ್ನು ಗಮನಿಸಬೇಕು. ಆತ ಹೇಳುತ್ತಾನೆ: 'ವ್ಯಕ್ತಿಯ ಏಕಾಂತವೇ ದೇವರು.' ಎಷ್ಟು ಸತ್ಯದ ಮಾತಲ್ಲವೇ? ಅರಮನೆಯ ಲೋಕಾಂತಕ್ಕೆ ಬೆನ್ನುಹಾಕಿ ಹೊರಟ ನಂತರದ ಏಕಾಂತದಲ್ಲಿಯೇ ಬುದ್ಧನಿಗೆ ಮನುಷ್ಯನ ದುಃಖದ ಸ್ವರೂಪವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಯಿತು. ದೀನರಲ್ಲಿ, ದುಃಖಿತರಲ್ಲಿ ಬುದ್ಧ ಭಗವಂತನನ್ನು ಕಂಡ. ಹಾಗೆ ಕಾಣುವ ಶಕ್ತಿಯನ್ನು ಕೊಟ್ಟಿದ್ದು ಏಕಾಂತ.

ಏಕಾಂತದ ಕುರಿತ ಇದೆಲ್ಲ ಜಿಜ್ಞಾಸೆಗೆ ಕಾರಣ ಈ ಹೊತ್ತು ಇಡೀ ಜಗತ್ತು ಮನೆಯಲ್ಲಿ ಕೂರಬೇಕಾಗಿ ಬಂದಿರುವ ಸನ್ನಿವೇಶ. ಕೊರೊನಾ ಸೋಂಕಿನ ಭಯದಲ್ಲಿ ನಮ್ಮನ್ನು ನಾವು ಪ್ರತ್ಯೇಕಿಸಿಕೊಂಡು, ಒಂಟಿತನ ಸೃಷ್ಟಿಸಿಕೊಂಡಿದ್ದೇವಷ್ಟೇ. ಈ